E-mail : academic.pg@kud.ac.in
Website: kud.ac.in
Academic (PG/Ph.D) Section

ಕರ್ನಾಟಕ ವಿಶ್ವವಿದ್ಯಾಲಯ,
ಪಾವಟೆನಗರ, ಧಾರವಾಡ –580003
KARNATAK UNIVERSITY,
Pavate Nagar, Dharwad-580 003
'A' Grade NAAC Accredited
University Potential for Excellence

Phone: (0836) 2215270

ಸಂಖ್ಯೆ: KU/Aca/Ph.D/ASO/01/2026-27/42(A) **ದಿನಾಂಕ : 23.11.2026**

ಅಧಿಸೂಚನೆ

2026-27ನೇ ಶೈಕ್ಷಣಿಕ ವರ್ಷಕ್ಕೆ ಪಿ.ಎಚ್.ಡಿ. (ಡಾಕ್ಟರ್ ಆಫ್ ಫಿಲಾಸಫಿ) ಪದವಿ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ (ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ 55% ಅಂಕಗಳನ್ನು ಹೊಂದಿರಬೇಕು; ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 5% ರಷ್ಟು ಸಡಿಲಿಕೆಇರುತ್ತದೆ) ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಭರ್ತಿಮಾಡಿದ ಅರ್ಜಿಯ ಮುದ್ರಿತ ಪ್ರತಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರಿಗೆ ದಿನಾಂಕ: **10.12.2026** ರಂದು ಅಥವಾ ಅದಕ್ಕೂ ಮುಂಚಿತವಾಗಿ ಸಲ್ಲಿಸತಕ್ಕದ್ದು.

1. ಪಿ.ಎಚ್.ಡಿ. ಕಾರ್ಯಕ್ರಮದ ಅಧ್ಯಯನ ವಿಧಾನಗಳು

ಅಭ್ಯರ್ಥಿಗಳು ಪೂರ್ಣಾವಧಿ ಅಥವಾ ಅರೆಕಾಲಿಕ ಪಿ.ಎಚ್.ಡಿ. ಕಾರ್ಯಕ್ರಮಕ್ಕೆ ನೋಂದಾಯಿಸಿಕೊಳ್ಳಬಹುದು.

ಪೂರ್ಣಾವಧಿ: ಪೂರ್ಣಾವಧಿ ಪಿ.ಎಚ್.ಡಿ. ಕಾರ್ಯಕ್ರಮವನ್ನು ಅರ್ಹ ಅಭ್ಯರ್ಥಿಯು ಮಹಾಪ್ರಬಂಧವನ್ನು ಸಲ್ಲಿಸುವವರೆಗೆ ಸಂಬಂಧಪಟ್ಟ ವಿಭಾಗದಲ್ಲಿ ನಿಯಮಿತವಾಗಿ ಕಾರ್ಯನಿರ್ವಹಿಸತಕ್ಕದ್ದು.

ಅರೆಕಾಲಿಕ: ಈ ಕೆಳಗಿನ ಯಾವುದೇ ವರ್ಗಗಳಿಗೆ ಒಳಪಡುವ ಅಭ್ಯರ್ಥಿಗಳು ಅರೆಕಾಲಿಕ ವಿಧಾನದಲ್ಲಿ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

1. ವಿಶ್ವವಿದ್ಯಾಲಯದ ವಿಭಾಗದಲ್ಲಿ ಅಥವಾ ವಿಶ್ವವಿದ್ಯಾಲಯದ ಸಂಯೋಜಿತ/ಘಟಕ ಕಾಲೇಜಿನಲ್ಲಿ ಕನಿಷ್ಠ ಎರಡು ವರ್ಷಗಳ ಸೇವೆ ಸಲ್ಲಿಸಿರುವ ಖಾಯಂ (ಆಡಳಿತ ಮಂಡಳಿ ನೇಮಕಾತಿ ಸೇರಿದಂತೆ) ಅಧ್ಯಾಪಕರು.

2. ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಮಂಡಳಿಗಳು/ವಿಶ್ವವಿದ್ಯಾಲಯಗಳಿಂದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಖಾಯಂ (ಆಡಳಿತ ಮಂಡಳಿ ನೇಮಕಾತಿ ಸೇರಿದಂತೆ) ಅಧ್ಯಾಪಕರು. ಅಂತಹ ಅಭ್ಯರ್ಥಿಗಳು ತಮ್ಮ ಸಂಸ್ಥೆಯಿಂದ ನಿರಾಪೇಕ್ಷಣಾ ಪತ್ರವನ್ನು ಹಾಜರುಪಡಿಸತಕ್ಕದ್ದು.

3. ನೋಂದಾಯಿತ ಸಂಸ್ಥೆ/ಉದ್ಯಮದಲ್ಲಿ ನಾಲ್ಕು ವರ್ಷಗಳ ನಿಯಮಿತ ಸೇವೆಯನ್ನು ಹೊಂದಿರುವ ಮತ್ತು ಅರ್ಹತಾ ಪದವಿಯನ್ನು ಪೂರ್ಣಗೊಳಿಸಿ ನಾಲ್ಕು ವರ್ಷಗಳಿಗಿಂತ ಕಡಿಮೆಇಲ್ಲದ ಅಧ್ಯಾಪಕೇತರ ಅಭ್ಯರ್ಥಿಗಳು.

4. ಅರ್ಹತಾ ಪದವಿಯ ನಂತರ ನಾಲ್ಕು ವರ್ಷಗಳ ಸೇವೆ ಸೇರಿದಂತೆ ಇತರ ಷರತ್ತುಗಳನ್ನು ಪೂರೈಸುವ, ರಾಜ್ಯ ಮತ್ತು ಕೇಂದ್ರ ಸರ್ಕಾರಿ ಕಚೇರಿಗಳು, ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಗಳಲ್ಲಿ ಖಾಯಂ ನೌಕರರಾಗಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಿಬ್ಬಂದಿ ವರ್ಗದವರು ಮತ್ತು ಬೋಧಕೇತರ ವೃತ್ತಿಪರರು.

5. ಸೇವಾ ಖಾಯಂ ಆದ ನಂತರ ವಿಶ್ವವಿದ್ಯಾಲಯದಿಂದ ಖಾಯಂ ಆಧಾರದ ಮೇಲೆ ನೇಮಕಗೊಂಡ ಸಂಶೋಧನಾ ಸಹಾಯಕರು /ತಾಂತ್ರಿಕ ಸಹಾಯಕರು.

6. ನಾಲ್ಕು ವರ್ಷಗಳ ಸೇವೆ ಹೊಂದಿರುವ ಭಾರತ ಸರ್ಕಾರದ ಸಶಸ್ತ್ರ ಪಡೆಗಳು ಮತ್ತು ಅರೆಸೇನಾ ಪಡೆಗಳ ಅಧಿಕಾರಿಗಳು.

7. ಎಲ್ಲಾ ಅರ್ಜಿದಾರರು ತಮ್ಮ ಉದ್ಯೋಗದ ಅವಧಿ ಮತ್ತು ಸ್ವರೂಪದ ಬಗ್ಗೆ ತಮ್ಮ ಉದ್ಯೋಗದಾತರಿಂದ ದೃಢೀಕರಣ ಪತ್ರಗಳನ್ನು ಮತ್ತು ಉದ್ಯೋಗದಾತರಿಂದ 'ನಿರಾಕ್ಷೇಪಣಾ ಪ್ರಮಾಣಪತ್ರ'ವನ್ನು ಹಾಜರುಪಡಿಸತಕ್ಕದ್ದು.

8. ಅಭ್ಯರ್ಥಿಗಳು ನೋಂದಣಿಯನ್ನು ಮುಂದುವರಿಸಲು ಪ್ರತಿ ವರ್ಷ ಅರ್ಜಿಯೊಂದಿಗೆ ಉದ್ಯೋಗದಾತರಿಂದ ಸೇವ ದೃಢೀಕರಣ ಪತ್ರವನ್ನು ಹಾಜರುಪಡಿಸಕ್ಕದ್ದು.

2. ಪ್ರವೇಶ ಪರೀಕ್ಷೆ

1. ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇಕಡಾವಾರು ಅಂಕಗಳನ್ನು ಪಡೆದ ಅರ್ಜಿದಾರರು ಪ್ರವೇಶ ಪರೀಕ್ಷೆಗೆ ಹಾಜರಾಗತಕ್ಕದ್ದು. ಆದಾಗ್ಯೂ (ಅ) ಸರ್ಕಾರಿ ಪ್ರಾಯೋಜಿತ ಅಭ್ಯರ್ಥಿಗಳು; (ಆ) ವಿದೇಶಿ ಅಭ್ಯರ್ಥಿಗಳು ಮತ್ತು (ಇ) UGC/UGC-CSIR/JRF ಪರೀಕ್ಷೆ/NET/SLET (ಕರ್ನಾಟಕ)/SET (ಕರ್ನಾಟಕ)/GATE/GRE/CEED (ವಿನ್ಯಾಸ ಸಾಮಾನ್ಯ ಪ್ರವೇಶ ಪರೀಕ್ಷೆ) ಹಾಗೂ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶ ಪಡೆದ ಎಂ.ಫಿಲ್ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಲಾಗುತ್ತದೆ.

   UGC/UGC-CSIR JRF/NET/SLET (ಕರ್ನಾಟಕ)/GATE/GRE/M.Phil (ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶ ಪಡೆದವರು) ಉತ್ತೀರ್ಣರಾದ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಗೆ ಹಾಜರಾಗಲು ಇಚ್ಛಿಸಿದಲ್ಲಿ, ನಿಗದಿತ ಶುಲ್ಕವನ್ನು ಪಾವತಿಸಿ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು.

2. ಪ್ರವೇಶ ಪರೀಕ್ಷೆಯು ತಲಾ 50 ಅಂಕಗಳ ಎರಡು ಪ್ರಶ್ನೆಪತ್ರಿಕೆಗಳನ್ನು ಒಳಗೊಂಡಿರುತ್ತದೆ. ಪತ್ರಿಕೆ-I ದತ್ತಾಂಶ ವಿಶ್ಲೇಷಣೆ, ಭಾಷಾ ಗ್ರಹಿಕೆ ಮತ್ತು ತಾರ್ಕಿಕ ಪರೀಕ್ಷೆಗೆ ಸಂಬಂಧಿಸಿದ 50 ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪತ್ರಿಕೆ-II ಮುಖ್ಯ/ಸಹವರ್ತಿ ವಿಷಯಗಳಿಗೆ ಸಂಬಂಧಿಸಿದ 50 ಬಹು ಆಯ್ಕೆ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

3. **ಪ್ರವೇಶ ಪರೀಕ್ಷೆಯ ಅವಧಿ: 120 ನಿಮಿಷಗಳು.**

4. **ಪ್ರವೇಶ ಪರೀಕ್ಷೆಯ ಸ್ಥಳ:** ಸಂಬಂಧಪಟ್ಟ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

3. ನಿಯಮಾವಳಿಗಳು: ಪಿ.ಎಚ್.ಡಿ. ಕಾರ್ಯಕ್ರಮಕ್ಕೆ ಪ್ರವೇಶಾತಿಗಾಗಿ ಅರ್ಹತಾ ಮಾನದಂಡಗಳು:

ಈ ಕೆಳಗಿನ ಅಭ್ಯರ್ಥಿಗಳು ಪಿ.ಎಚ್.ಡಿ. ಕಾರ್ಯಕ್ರಮಕ್ಕೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ:

1.1 ಈ ಕೆಳಗಿನವುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳು:

i. 4 ವರ್ಷ/8 ಸೆಮಿಸ್ಟರ್‌ಗಳ ಸ್ನಾತಕ ಪದವಿ ಕಾರ್ಯಕ್ರಮದ ನಂತರ ಸಂಬಂಧಪಟ್ಟ ಅಥವಾ ಸಹವರ್ತಿ ವಿಷಯದಲ್ಲಿ 1 ವರ್ಷ/2 ಸೆಮಿಸ್ಟರ್‌ಗಳ ಸ್ನಾತಕೋತ್ತರ ಪದವಿ ಕಾರ್ಯಕ್ರಮವನ್ನು ಅಥವಾ 3 ವರ್ಷದ ಸ್ನಾತಕ ಪದವಿ ಕಾರ್ಯಕ್ರಮದ ನಂತರ ಸಂಬಂಧಪಟ್ಟ ಅಥವಾ ಸಹವರ್ತಿ ವಿಷಯದಲ್ಲಿ 2 ವರ್ಷ/4 ಸೆಮಿಸ್ಟರ್‌ಗಳ ಸ್ನಾತಕೋತ್ತರ

ಪದವಿ ಕಾರ್ಯಕ್ರಮ ಅಥವಾ ಸಂಬಂಧಿತ ಶಾಸನಬದ್ಧ ನಿಯಂತ್ರಣ ಸಂಸ್ಥೆಯಿಂದ ಸ್ನಾತಕೋತ್ತರ ಪದವಿಗೆ ತತ್ಸಮಾನವೆಂದು ಘೋಷಿಸಲ್ಪಟ್ಟ ವಿದ್ಯಾರ್ಹತೆಯನ್ನು ಒಟ್ಟು ಕನಿಷ್ಠ 55% ಅಂಕಗಳೊಂದಿಗೆ ಅಥವಾ ಶ್ರೇಣಿ ಪದ್ಧತಿ ಜಾರಿಯಲ್ಲಿರುವಲ್ಲಿ ಪಾಂಯಿಂಟ್ ಸ್ಕೇಲ್‌ನಲ್ಲಿ ಅದಕ್ಕೆ ತತ್ಸಮಾನವಾದ ಶ್ರೇಣಿಯೊಂದಿಗೆ ಪೂರ್ಣಗೊಳಿಸಿರಬೇಕು.

ii. ತನ್ನ ಮೂಲ ದೇಶದ ಕಾನೂನಿನಡಿಯಲ್ಲಿ ಸ್ಥಾಪಿತವಾದ ಅಥವಾ ಸಂಯೋಜಿಸಲ್ಪಟ್ಟ ಪ್ರಾಧಿಕಾರದಿಂದ ಅಥವಾ ಶಿಕ್ಷಣ ಸಂಸ್ಥೆಯ ಗುಣಮಟ್ಟ ಮತ್ತು ಮಾನದಂಡಗಳನ್ನು ಮೌಲ್ಯಮಾಪನ ಮಾಡಲು, ಮಾನ್ಯತೆ ನೀಡಲು ಅಥವಾ ಖಚಿತಪಡಿಸಲು ಆ ದೇಶದ ಯಾವುದೇ ಇತರ ಶಾಸನಬದ್ಧ ಪ್ರಾಧಿಕಾರದಿಂದ ಅನುಮೋದಿತ, ಮಾನ್ಯತೆ ಪಡೆದ ಅಥವಾ ಅಧೀಕೃತಗೊಂಡ ಮೌಲ್ಯಮಾಪನ ಮತ್ತು ಮಾನ್ಯತಾ ಸಂಸ್ಥೆಯಿಂದ ಮಾನ್ಯತೆ ಪಡೆದ ವಿದೇಶಿ ಶಿಕ್ಷಣ ಸಂಸ್ಥೆಯಿಂದ ಪಡೆದ ತತ್ಸಮಾನ ವಿದ್ಯಾರ್ಹತೆ.

1.2 ಸಂಬಂಧಪಟ್ಟ ಅಥವಾ ಸಹವರ್ತಿ ವಿಷಯದಲ್ಲಿ ಎಂ.ಫಿಲ್ ಕಾರ್ಯಕ್ರಮವನ್ನು ಒಟ್ಟು ಕನಿಷ್ಠ 55% ಅಂಕಗಳೊಂದಿಗೆ ಅಥವಾ ಶ್ರೇಣಿ ಪದ್ಧತಿ ಜಾರಿಯಲ್ಲಿರುವ ಪಾಯಿಂಟ್ ಸ್ಕೇಲ್ ನಲ್ಲಿ ಅದಕ್ಕೆ ತತ್ಸಮಾನವಾದ ಶ್ರೇಣಿಯೊಂದಿಗೆ ಪೂರ್ಣಗೊಳಿಸಿದ ಅಭ್ಯರ್ಥಿಗಳು ಅಥವಾ ಮೇಲಿನ ನಿಯಮಗಳನ್ವಯ ಮಾನ್ಯತೆ ಪಡೆದ ವಿದೇಶಿ ಶಿಕ್ಷಣ ಸಂಸ್ಥೆಯಿಂದ ತತ್ಸಮಾನ ವಿದ್ಯಾರ್ಹತೆ ಪಡೆದವರು ಪಿಎಚ್.ಡಿ ಕಾರ್ಯಕ್ರಮಕ್ಕೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

ಸ್ನಾತಕೋತ್ತರ ಪದವಿಯ ಫಲಿತಾಂಶಗಳನ್ನು ಅಂಕಪಟ್ಟಿಗಳಲ್ಲಿ ಶ್ರೇಣಿಗಳು/ಕ್ರೇಡಿಟ್ ಗಳು/ಸಂಚಿತ ಪಾಯಿಂಟ್‌ಗಳ ರೂಪದಲ್ಲಿ ಘೋಷಿಸಿದ್ದರೆ, ಆಯಾ ಅರ್ಹತಾ ಪರೀಕ್ಷೆಯ ಅಂಕಪಟ್ಟಿಯಲ್ಲಿ ನಿರ್ದಿಷ್ಟ ಪಡಿಸಿದ ಗ್ರೇಡ್ ಪಾಯಿಂಟ್ ಮಾನದಂಡಗಳ ಪ್ರಕಾರ ಕನಿಷ್ಠ ಅರ್ಹತಾ ಮಾನದಂಡಗಳನ್ನು ನಿರ್ಣಯಿಸಲು ಅಂತಹ ಶ್ರೇಣಿಗಳು/ಪಾಯಿಂಟ್‌ಗಳನ್ನು ಶೇಕಡಾವಾರು ಅಂಕಗಳಿಗೆ ಪರಿವರ್ತಿಸತಕ್ಕದ್ದು.

4. ಖಾಲಿ ಇರುವ ಸ್ಥಾನಗಳ ವಿವರ :

ವಿವಿಧ ವಿಭಾಗಗಳಲ್ಲಿನ ಖಾಲಿ ಹುದ್ದೆಗಳ ವಿವರ ಕೆಳಗಿನಂತಿದೆ:

ಕಲಾ ನಿಖಾಯ:

ಕ್ರ.ಸಂ.	ವಿಭಾಗ	ಖಾಲಿ ಹುದ್ದೆಗಳ ಸಂಖ್ಯೆ
1.	ಇಂಗ್ಲೀಷ	20
2.	ಕನ್ನಡ	04
3.	ಹಿಂದಿ	02
ಒಟ್ಟು		**26**

ವಾಣಿಜ್ಯ ನಿಖಾಯ:

ಕ್ರ.ಸಂ.	ವಿಭಾಗ	ಖಾಲಿ ಹುದ್ದೆಗಳ ಸಂಖ್ಯೆ
1.	ವಾಣಿಜ್ಯ	06
ಒಟ್ಟು		**06**

ಶಿಕ್ಷಣ ನಿಖಾಯ:

ಕ್ರ.ಸಂ.	ವಿಭಾಗ	ಖಾಲಿ ಹುದ್ದೆಗಳ ಸಂಖ್ಯೆ
1.	ಶಿಕ್ಷಣ	06
ಒಟ್ಟು		**06**

ಕಾನೂನು ನಿಖಾಯ:

ಕ್ರ.ಸಂ.	ವಿಭಾಗ	ಖಾಲಿ ಹುದ್ದೆಗಳ ಸಂಖ್ಯೆ
1.	ಕಾನೂನು	03
ಒಟ್ಟು		**03**

ನಿರ್ವಹಣಾ ನಿಖಾಯ:

ಕ್ರ.ಸಂ.	ವಿಭಾಗ	ಖಾಲಿ ಹುದ್ದೆಗಳ ಸಂಖ್ಯೆ
1.	ನಿರ್ವಹಣೆ	16
ಒಟ್ಟು		**16**

ಸಮಾಜ ವಿಜ್ಞಾನ ನಿಖಾಯ:

ಕ್ರ.ಸಂ.	ವಿಭಾಗ	ಖಾಲಿ ಹುದ್ದೆಗಳ ಸಂಖ್ಯೆ
1.	ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ	03
2.	ಮಾನವಶಾಸ್ತ್ರ	05
3.	ಅರ್ಥಶಾಸ್ತ್ರ	08
4.	ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ	11
5.	ತತ್ವಶಾಸ್ತ್ರ	12
6.	ರಾಜ್ಯಶಾಸ್ತ್ರ	16
7.	ಸಮಾಜಕಾರ್ಯ	05
8.	ಸಮಾಜಶಾಸ್ತ್ರ	09
ಒಟ್ಟು		**69**

ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯ:

ಕ್ರ.ಸಂ.	ವಿಭಾಗ	ಖಾಲಿ ಹುದ್ದೆಗಳ ಸಂಖ್ಯೆ
1.	ಅನ್ವಯಿಕ ಅನುವಂಶಶಾಸ್ತ್ರ	04
2.	ಸಸ್ಯಶಾಸ್ತ್ರ	03
3.	ಜೀವರಸಾಯನಶಾಸ್ತ್ರ	10
4.	ಜೈವಿಕತಂತ್ರಜ್ಞಾನ ಮತ್ತು ಸೂಕ್ಷ್ಮಜೀವಶಾಸ್ತ್ರ	06
5.	ರಸಾಯನಶಾಸ್ತ್ರ	23
6.	ಗಣಕ ವಿಜ್ಞಾನ	06
7.	ಗಣಿತಶಾಸ್ತ್ರ	27
8.	ಕಡಲಜೀವಶಾಸ್ತ್ರ, ಸ್ನಾತಕೋತ್ತರ ಕೇಂದ್ರ, ಕಾರವಾರ	05
9.	ಭೌತಶಾಸ್ತ್ರ	03
10.	ಮನೋವಿಜ್ಞಾನ	06
11.	ಸಂಖ್ಯಾಶಾಸ್ತ್ರ	11
12.	ಪ್ರಾಣಿಶಾಸ್ತ್ರ	03
ಒಟ್ಟು		**107**

5. ಶುಲ್ಕ ಚಲನ್‌ನೊಂದಿಗೆ ಅರ್ಜಿಗಳನ್ನು ಸಲ್ಲಿಸಲು ಸೂಚನೆಗಳು:

1. ಅರ್ಜಿ ನಮೂನೆಯನ್ನು www.kud.ac.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು ಮತ್ತು ಸರಿಯಾಗಿ ಭರ್ತಿ ಮಾಡಿದ ಅರ್ಜಿನಮೂನೆಯನ್ನು ಎಲ್ಲ ಅಡಕಗಳೊಂದಿಗೆ (ಅರ್ಜಿ ಸಂಸ್ಕರಣಾ ಶುಲ್ಕದ ಆನ್‌ಲೈನ್ ಪಾವತಿ ಚಲನ ಸೇರಿದಂತೆ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗದ ಅಧ್ಯಕ್ಷರಿಗೆ ಸಲ್ಲಿಸಬೇಕು.

2. **ಶುಲ್ಕದ ವಿವರಗಳು ಈ ಕೆಳಗಿನಂತಿವೆ:**
   i. ಅರ್ಜಿ ಶುಲ್ಕ: ರೂ. 2665/- (ಪೂರ್ಣಾವಧಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾತ್ರ ರೂ. 1330/-)
   ii. ವಿದೇಶಿ ವಿದ್ಯಾರ್ಥಿಗಳಿಗೆ ರೂ. 5330/-.

   ವಿದ್ಯಾರ್ಥಿಗಳು ಶುಲ್ಕವನ್ನು SBI Collect ಮೂಲಕ ಆನ್‌ಲೈನ್‌ನಲ್ಲಿ ಶುಲ್ಕವನ್ನು ಪಾವತಿಸಬೇಕು. ಹೆಚ್ಚಿನ ಮಾಹಿತಿಗಾಗಿ www.kud.ac.in ವೆಬ್‌ಸೈಟ್‌ಗೆ ಭೇಟಿ ನೀಡಿ. ಒಮ್ಮೆ ಪಾವತಿಸಿದ ಶುಲ್ಕವನ್ನು ಮರುಪಾವತಿಸಲಾಗುವುದಿಲ್ಲ.

   ಮಾನ್ಯವಾದ ಪ್ರಮಾಣಪತ್ರಗಳಿಲ್ಲದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

   ಇತರ ವಿಶ್ವವಿದ್ಯಾಲಯಗಳ ಅಭ್ಯರ್ಥಿಗಳು ಆಯ್ಕೆಯಾದಲ್ಲಿ, ಪ್ರವೇಶದ ಸಮಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಶೈಕ್ಷಣಿಕ ವಿಭಾಗದಿಂದ ನೀಡಲಾದ ಅರ್ಹತಾ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು. ಅಗತ್ಯ ದಾಖಲೆಗಳನ್ನು ಸಲ್ಲಿಸುವ ಮೂಲಕ ಮತ್ತು ನಿಗದಿತ ಶುಲ್ಕವನ್ನು ಪಾವತಿಸುವ ಮೂಲಕ ಅರ್ಹತಾ ಪ್ರಮಾಣಪತ್ರಗಳನ್ನು ಪಡೆದುಕೊಳ್ಳತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ವಿಭಾಗಗಳನ್ನು ಸಂಪರ್ಕಿಸಿ ಅಥವಾ ವಿಶ್ವವಿದ್ಯಾಲಯದ ವೆಬ್‌ಸೈಟ್ www.kud.ac.in ಗೆ ಭೇಟಿ ನೀಡಿ.

6. ಕಾರ್ಯಕ್ರಮಗಳ ವೇಳಾಪಟ್ಟಿ:

1.	ಅರ್ಜಿ ನಮೂನೆ ವಿತರಣೆ (ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು)	**23.11.2026**	**ಸೋಮವಾರ**
2.	ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ	**10.12.2026**	**ಗುರುವಾರ**
3.	ಪ್ರವೇಶ ಪರೀಕ್ಷೆಯ ದಿನಾಂಕ	**24.12.2026**	**ಗುರುವಾರ**
4.	ಅರ್ಹ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ	**28.12.2026**	**ಸೋಮವಾರ**
5.	ಸಂದರ್ಶನದ ದಿನಾಂಕ	**02.01.2027 ಮತ್ತು 04.01.2027**	**ಶನಿವಾರ ಮತ್ತು ಸೋಮವಾರ**
6.	ಆಯ್ಕೆಯಾದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ	**05.01.2027**	**ಮಂಗಳವಾರ**
7.	ಆಯ್ಕೆ ಪಟ್ಟಿ ಪ್ರಕಟವಾದ ದಿನಾಂಕದಿಂದ 07 ದಿನಗಳೊಳಗೆ ಪ್ರವೇಶಾತಿ ಪಡೆಯಲು ಕೊನೆಯ ದಿನಾಂಕವಾಗಿರುತ್ತದೆ.		
8.	ಆಯ್ಕೆಯಾದ ಅಭ್ಯರ್ಥಿಗಳು 7 ದಿನಗಳ ಒಳಗಾಗಿ ಪ್ರವೇಶಾತಿ ಪಡೆಯಲು ವಿಫಲವಾದಲ್ಲಿ ಕಾಯ್ದಿರಿಸಿದ ಪಟ್ಟಿಯಲ್ಲಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು. ಮುಂದುವರೆದು, ಕಾಯ್ದಿರಿಸಿದ ಪಟ್ಟಿಯ ಅಭ್ಯರ್ಥಿಗಳು ಕಾಯ್ದಿರಿಸಿದ ಪಟ್ಟಿ ಪ್ರಕಟವಾದ ದಿನಾಂಕದಿಂದ 07 ದಿನಗಳೊಳಗೆ ಶುಲ್ಕವನ್ನು ಪಾವತಿಸತಕ್ಕದ್ದು.		

ಒಂದು ವೇಳೆ ಕೊನೆಯ ದಿನಾಂಕವನ್ನು ಸಾರ್ವಜನಿಕ ರಜೆ ಘೋಷಣೆಯಾದರೆ, ಮುಂದಿನ ಕೆಲಸದ ದಿನವೇ ಕೊನೆಯ ದಿನಾಂಕವಾಗಿರುತ್ತದೆ.

ಪಿ.ಎಚ್.ಡಿ. ಕಾರ್ಯಕ್ರಮದ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಂಬಂಧಿತ ವಿಭಾಗದ ಸೂಚನಾ ಫಲಕದಲ್ಲಿ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ. ಈ ಸಂಬಂಧ ಯಾವುದೇ ಪತ್ರವ್ಯವಹಾರವನ್ನು ನಡೆಸಲಾಗುವುದಿಲ್ಲ.

ಸೂಚನೆ:

1. **ಪಿ.ಎಚ್.ಡಿ. ಕಾರ್ಯಕ್ರಮಕ್ಕೆ ಆಯ್ಕೆಯಾಗುವುದು ಫೆಲೋಶಿಪ್/ವಿದ್ಯಾರ್ಥಿವೇತನವನ್ನು ಖಾತರಿಪಡಿಸುವುದಿಲ್ಲ. ಫೆಲೋಶಿಪ್/ವಿದ್ಯಾರ್ಥಿವೇತನದ ಮಂಜೂರಾತಿಯು ನಿಧಿ/ಯೋಜನೆಗಳ ಲಭ್ಯತೆ ಮತ್ತು ವಿಶ್ವವಿದ್ಯಾಲಯದ ಇತರ ಮಾನದಂಡಗಳಿಗೆ ಒಳಪಟ್ಟಿರುತ್ತದೆ.**
2. **ಪಿಎಚ್.ಡಿ ಕೋರ್ಸಿಗೆ ಪ್ರವೇಶ ಪಡೆದ ಎಲ್ಲ ಅಭ್ಯರ್ಥಿಗಳು ಪೂರ್ಣ ಶುಲ್ಕವನ್ನು ಪಾವತಿಸಕ್ಕದ್ದು ಮತ್ತು ಪೂರ್ಣಾವಧಿ ವಿದ್ಯಾರ್ಥಿಗಳು ಎಸ್‌ಎಸ್‌ಪಿ (SSP) ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದು.**

23/11/26

ಕುಲಸಚಿವರು

ಪ್ರತಿ;

1. ಎಲ್ಲ ಡೀನರುಗಳು/ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು, ಕ.ವಿ.ವಿ ಧಾರವಾಡ/ವಿವಿಧ ಸ್ನಾತಕೋತ್ತರ ಕೇಂದ್ರಗಳ ಆಡಳಿತಾಧಿಕಾರಿಗಳು.
2. ಕುಲಸಚಿವರು (ಮೌಲ್ಯಮಾಪನ), ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
3. ಹಣಕಾಸು ಅಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
5. ಗ್ರಂಥಪಾಲಕರು, ಪ್ರೊ. ಶಿ.ಶಿ. ಬಸವನಾಳ ಗ್ರಂಥಾಲಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
6. ಮುಖ್ಯಸ್ಥರು, U.E.I.G.B., ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
7. ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.